# ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ
ಲಕ್ಷ್ಮೀಪುರಂ, ಮೈಸೂರು-570 004.
ದೂರವಾಣಿ: 0821-4535020,
Email :musicuniversitymys@gmail.com

J.L.B. Road, Near Ashoka Circle
Lakshmipuram, Mysuru – 570 004.
Ph.Office: 0821-4535020
Website: https://www.musicuniversity.ac.in


ಸಂಖ್ಯೆ:ಕೆಎಸ್‌ಜಿಎಚ್/ಸಂಪ್ರಕವಿ/ಪ.ವಿ/2025-26/ ದಿನಾಂಕ: 31.01.2026

## ಅಧಿಸೂಚನೆ

ವಿಷಯ: ಏಪ್ರಿಲ್ –ಮೇ 2026ರಲ್ಲಿ ನಡೆಯಲಿರುವ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಜೂನಿಯರ್, ಸೀನಿಯರ್, ವಿದ್ವತ್‌ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ನೋಂದಣಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲು ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:– 1. **ಸಂಖ್ಯೆ:ಕೆಎಸ್‌ಜಿಎಚ್/ಸಂಪ್ರಕವಿ/ಪ.ವಿ/2025-26/692 ದಿನಾಂಕ: 20.12.2025**
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.12.2025
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:31.01.2026

*******

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಏಪ್ರಿಲ್ –ಮೇ 2026ರಲ್ಲಿ ನಡೆಯಲಿರುವ ವಿಶೇಷ ಸಂಗೀತ (ಕರ್ನಾಟಕ/ಹಿಂದೂಸ್ಥಾನಿ), ಭರತನಾಟ್ಯ, ಕೂಚುಪುಡಿ, ಕಥಕ್ ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ಥಾನಿ) ಜೂನಿಯರ್, ಸೀನಿಯರ್, ವಿದ್ವತ್‌ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಒಳಪಟ್ಟಂತೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲು ದಿನಾಂಕವನ್ನು ವಿಸ್ತರಿಸಲಾಗಿದೆ. ಈ ಪರೀಕ್ಷೆಗಳಿಗೆ ಹಾಜರಾಗಲು ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ವಿಶ್ವವಿದ್ಯಾಲಯದ ಜಾಲತಾಣ (Website: https://www.musicuniversity.ac.in) ಮೂಲಕ ನೋಂದಣಿ ಮಾಡಿಕೊಳ್ಳಬಹುದು.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆ ತೆಗೆದುಕೊಳ್ಳಲು ಅಗತ್ಯವಿರುವ ಅರ್ಹತೆಗಳು:**

- ವಿಶ್ವವಿದ್ಯಾಲಯದ ನಿಯಮಾವಳಿಯಂತೆ ಕಿರಿಯ ದರ್ಜೆ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ: ಏಪ್ರಿಲ್ 2026ಕ್ಕೆ 10 ವರ್ಷ ತುಂಬಿರಬೇಕು.
- **ವಿಶ್ವವಿದ್ಯಾಲಯದಲ್ಲಿ 2023–24 ರಲ್ಲಿ ನಡೆದ ವಿಶೇಷ ಪರೀಕ್ಷೆಯಲ್ಲಿ ಉತ್ತೀರ್ಣರಾದ ಜೂನಿಯರ್ ವಿದ್ಯಾರ್ಥಿಗಳು ಸೀನಿಯರ್ ಪರೀಕ್ಷೆಗೆ ಹಾಗೂ ಸೀನಿಯರ್ ವಿದ್ಯಾರ್ಥಿಗಳು ವಿದ್ವತ್ ಪೂರ್ವ ಪರೀಕ್ಷೆ ತೆಗೆದುಕೊಳ್ಳಬಹುದು.**
- ಹಿರಿಯ ದರ್ಜೆಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಿರಿಯ (ಜೂನಿಯರ್) ದರ್ಜೆಯಲ್ಲಿ ತೇರ್ಗಡೆಯಾಗಿರಬೇಕು. ವಿದ್ವತ್‌ಪೂರ್ವ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಹಾಗೂ ವಿದ್ವತ್ ಅಂತಿಮ ಪರೀಕ್ಷೆಗೆ ಅರ್ಜಿ ಸಲ್ಲಿಸಲು ವಿದ್ವತ್‌ಪೂರ್ವ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಅರ್ಜಿ ಸಲ್ಲಿಸಬೇಕು.

- ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 2 ವರ್ಷಗಳಾಗಿರಬೇಕು.
- ವಿದ್ವತ್‌ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ ಎರಡು ವರ್ಷಗಳಾಗಿರಬೇಕು.
- ವಿದ್ವತ್‌ಪೂರ್ವ ಪರೀಕ್ಷೆ ಉತ್ತೀರ್ಣರಾದ ನಂತರ ವಿದ್ವತ್ ಅಂತಿಮ ಪರೀಕ್ಷೆ ತೆಗೆದುಕೊಳ್ಳಬಹುದು.
- ನೇರವಾಗಿ ಹಿರಿಯ ದರ್ಜೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗೆ 17 ವರ್ಷ ತುಂಬಿದ್ದು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ ಪದವಿ ಪೂರ್ವ (ಪಿ.ಯು.ಸಿ) ಶಿಕ್ಷಣ ಇಲಾಖೆ/ಡಿಪ್ಲೊಮಾ/ಸ್ನಾತಕ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.
- ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಸ್ನಾತಕೋತ್ತರ ಪದವಿಯಲ್ಲಿ ಐಚ್ಛಿಕವಾಗಿ ವ್ಯಾಸಂಗ ಮಾಡಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು ನೇರವಾಗಿ ವಿದ್ವತ್ ಅಂತಿಮ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.
- ವಿಶ್ವವಿದ್ಯಾಲಯದ ನಿಯಮಾನುಸಾರ ಒಬ್ಬ ಅಭ್ಯರ್ಥಿ ಹಾಡುಗಾರಿಕೆ ಹಾಗೂ ವಾದ್ಯಸಂಗೀತ ಎರಡೂ ಪರೀಕ್ಷೆಗಳಿಗೆ ಒಂದೇ ವರ್ಷದಲ್ಲಿ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತೆಯೇ ಹಾಡುಗಾರಿಕೆ ಅಥವಾ ವಾದ್ಯ ಸಂಗೀತದ ಪರೀಕ್ಷೆಯೊಂದಿಗೆ ತಾಳವಾದ್ಯ ಮತ್ತು ನೃತ್ಯದ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

## ಅಭ್ಯರ್ಥಿಗಳು ಪರೀಕ್ಷಾ ನೋಂದಣಿಗಾಗಿ ಆನ್‌ಲೈನ್‌ನ ಮೂಲಕ ಅರ್ಜಿ ಸಲ್ಲಿಸುವ ವಿಧಾನ

1. ಅಭ್ಯರ್ಥಿಗಳು ಪರೀಕ್ಷಾ ನೋಂದಣಿಗಾಗಿ ಆನ್‌ಲೈನ್‌ನ ಮೂಲಕ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದ ಜಾಲತಾಣ www.musicuniversity.ac.in ದಲ್ಲಿ ಅವಕಾಶ ಕಲ್ಪಿಸಲಾಗಿದೆ.
2. ಅಭ್ಯರ್ಥಿಗಳು ತಮ್ಮ ವಿವರಗಳನ್ನು ಆನ್‌ಲೈನ್‌ನ ಮೂಲಕ ಕಡ್ಡಾಯವಾಗಿ ಯಾವುದೇ ತಪ್ಪುಗಳು ಇಲ್ಲದಂತೆ ನಮೂದಿಸಬೇಕು.
3. ಅಭ್ಯರ್ಥಿಯು ತಾನು ಅಭ್ಯಾಸ ಮಾಡುತ್ತಿರುವ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಶಿಕ್ಷಕರ/ ಪರೀಕ್ಷಕರ ನೋಂದಣಿ ಸಂಖ್ಯೆಯನ್ನು ಆನ್‌ಲೈನ್‌ನ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ನಮೂದಿಸಬೇಕು. ಅಭ್ಯರ್ಥಿಗಳು ನಮೂದಿಸದಿದ್ದಲ್ಲಿ ಆನ್‌ಲೈನ್‌ನಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿ ಸಿಂಧು ಆಗುವುದಿಲ್ಲ.
4. ಅಭ್ಯರ್ಥಿಗಳ ವಯಸ್ಸಿನ ಬಗ್ಗೆ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್/ಎಸ್.ಎಸ್.ಎಲ್.ಸಿ ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ ಮೂಲ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.
5. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಆಂಶಿಕ ರಿಯಾಯಿತಿ ಇದೆ. ಪರೀಕ್ಷಾ ಶುಲ್ಕದಿಂದ ರಿಯಾಯಿತಿ ಪಡೆಯಲು ಈ ವರ್ಗದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಜಾತಿ ಪ್ರಮಾಣಪತ್ರದ ಆರ್.ಡಿ. ನಂಬರನ್ನು ಆನ್‌ಲೈನ್‌ನಲ್ಲಿ ದಾಖಲಿಸ ಬೇಕು. ಹಾಗೂ ಸಂಬಂಧಪಟ್ಟ ಮೂಲ ದಾಖಲೆಯನ್ನು ಅಪ್ಲೋಡ್ ಮಾಡಬೇಕು.

6. ವಿಶೇಷ ಚೇತನ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಆಂಶಿಕ ರಿಯಾಯಿತಿ ನೀಡಲಾಗುತ್ತದೆ. ಇಂತಹ ಅಭ್ಯರ್ಥಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಮೂಲ ಪ್ರಮಾಣಪತ್ರವನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡಬೇಕು.

## ಅಭ್ಯರ್ಥಿಗಳು ಆನ್‌ಲೈನ್ ನಲ್ಲಿ ಕಡ್ಡಾಯವಾಗಿ ಅಪ್ಲೋಡ್ ಮಾಡಬೇಕಾದ ದಾಖಲೆಗಳು

- ಪಾಸ್ಪೋರ್ಟ್ ಸೈಜ್ ಫೋಟೋ
- ವಿದ್ಯಾರ್ಥಿಯ ಸಹಿ
- ಆಧಾರ್ ಕಾರ್ಡ್/ಎಸ್ ಎಸ್ ಎಲ್ ಸಿ ಅಂಕಪಟ್ಟಿ
- ಜಾತಿ ಪ್ರಮಾಣ ಪತ್ರ (ಅಗತ್ಯವಿರುವ ಅಭ್ಯರ್ಥಿಗಳು ಮಾತ್ರ)
- ವಿಶೇಷ ಚೇತನ ಪ್ರಮಾಣ ಪತ್ರ (ಅಗತ್ಯವಿರುವ ಅಭ್ಯರ್ಥಿಗಳು ಮಾತ್ರ)
- ಶೈಕ್ಷಣಿಕ ಅರ್ಹತಾ ಪತ್ರ

## ಆನ್‌ಲೈನ್ ಮೂಲಕ ಶುಲ್ಕ ಪಾವತಿಸುವ ವಿಧಾನ

1. ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನ ಮೂಲಕ ಪಾವತಿಸಲು ಅವಕಾಶ ಕಲ್ಪಿಸಿದ್ದು, Debit Card/Credit Card/Net Banking/UPI ಮೂಲಕ ಪಾವತಿಸಬಹುದು.
2. ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ Debit Card/Credit Card/Net Banking/UPI ಮೂಲಕ ಪಾವತಿಸಬೇಕು. **ಚಲನ್/ಡಿ.ಡಿ./ ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.**
3. ಅಭ್ಯರ್ಥಿಗಳ ನೋಂದಣಿಗೆ ಅಂತಿಮ ದಿನಾಂಕ: 28.02.2026

ಈ ಪಟ್ಟಿಯಲ್ಲಿನ ಜೂನಿಯರ್, ಸೀನಿಯರ್, ವಿದ್ವತ್‌ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

| | |
|---|---|
| ಅ) ಕರ್ನಾಟಕ ಸಂಗೀತ | |
| ಅ) ಕರ್ನಾಟಕ ವಾದ್ಯ ಸಂಗೀತ | ವೀಣೆ/ಪಿಟೀಲು/ಕೊಳಲು/ನಾದಸ್ವರ/ಗೋಟುವಾದ್ಯ/ಕ್ಲಾರಿಯೋನೆಟ್/ಮ್ಯಾಂಡೊಲಿನ್/ಸ್ಯಾಕ್ಸೋಫೋನ್/ಕೊನಕೋಲು |
| ಆ) ಹಿಂದುಸ್ತಾನಿ ಸಂಗೀತ | |
| ಆ) ಹಿಂದುಸ್ತಾನಿ ವಾದ್ಯ ಸಂಗೀತ | ಪಿಟೀಲು/ಕೊಳಲು/ಬೀನ್/ಸಿತಾರ್/ಷಹನಾಯ್/ದಿಲ್ರುಬಾ/ಹಾರ್ಮೋನಿಯಂ/ಮೋಹನ್ ವೀಣಾ/ರುದ್ರವೀಣಾ/ಸಂತೂರ್/ಸರೋದ್/ಸಾರಂಗಿ |
| ಇ) ಕರ್ನಾಟಕ ತಾಳವಾದ್ಯ | ಮೃದಂಗ/ಖಂಜಿರ/ಘಟಂ/ಮೋರ್ಚಿಂಗ್/ಡೋಲು/ಡೋಲಕ್ |
| ಈ) ಹಿಂದುಸ್ತಾನಿ ತಾಳ ವಾದ್ಯ | ತಬಲ/ಪಕ್ವಾಜ್/ಡೋಲಕ್ |
| ಉ) ನೃತ್ಯ ವಿಭಾಗ | ಭರತನಾಟ್ಯ, ಕಥಕ್ ಹಾಗೂ ಕೂಚಿಪುಡಿ |

## ಪರೀಕ್ಷಾ ವಿಷಯ ಮತ್ತು ಶುಲ್ಕದ ವಿವರ

| ಕ್ರಂ.ಸಂ | ಪರೀಕ್ಷೆಯ ಹೆಸರು | ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಒಟ್ಟು ಮೊತ್ತ |
|---|---|---|---|---|
| 1 | ಕಿರಿಯ ದರ್ಜೆ (Junior) | 300/- | 2000-00 | 2,300-00 |
| 2 | ಹಿರಿಯ ದರ್ಜೆ (Senior) | 300/- | 3000-00 | 3,300-00 |
| 3 | ವಿದ್ವತ್‌ಪೂರ್ವ (Pre Vidwat) | 300/- | 3500-00 | 3,800-00 |
| 4 | ವಿದ್ವತ್ ಅಂತಿಮ (Final Vidwat ) | 300/- | 4000-00 | 4,300-00 |

**ಅಂಕಪಟ್ಟಿಯನ್ನು ಅಂಚೆ ಮೂಲಕ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಹೆಚ್ಚುವರಿಯಾಗಿ 200/– (ಇನ್ನೂರು ರೂ) ಗಳನ್ನು ಪಾವತಿಸಬೇಕು.**

## ಎಸ್.ಸಿ/ಎಸ್.ಟಿ ಮತ್ತು ವಿಶೇಷಚೇತನ ಅಭ್ಯರ್ಥಿಗಳ ಪರೀಕ್ಷಾ ಶುಲ್ಕ

| ಕ್ರಂ.ಸಂ | ಪರೀಕ್ಷೆಯ ಹೆಸರು | ನೋಂದಣಿ ಶುಲ್ಕ | ಪರೀಕ್ಷಾ ಶುಲ್ಕ | ಒಟ್ಟು ಮೊತ್ತ |
|---|---|---|---|---|
| 1 | ಕಿರಿಯ ದರ್ಜೆ (Junior) | 300/- | 1000-00 | 1,300-00 |
| 2 | ಹಿರಿಯ ದರ್ಜೆ (Senior) | 300/- | 1500-00 | 1,800-00 |
| 3 | ವಿದ್ವತ್‌ಪೂರ್ವ (Pre Vidwat) | 300/- | 1750-00 | 2,050-00 |
| 4 | ವಿದ್ವತ್ ಅಂತಿಮ (Final Vidwat) | 300/- | 2000-00 | 2,300-00 |

**ಅಂಕಪಟ್ಟಿಯನ್ನು ಅಂಚೆ ಮೂಲಕ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಹೆಚ್ಚುವರಿಯಾಗಿ 200/– (ಇನ್ನೂರು ರೂ) ಗಳನ್ನು ಪಾವತಿಸಬೇಕು.**

## ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ

| ಕ್ರಂ.ಸಂ | ವಿವರ | ದಿನಾಂಕ |
|---|---|---|
| 1 | ಅಧಿಸೂಚನೆ ಪ್ರಕಟಣೆಯ ದಿನಾಂಕ | 20.12.2025 |
| 2 | ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ದಿನಾಂಕ | 22.12.2025 |
| 3 | ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 31.01.2026 |
| 4 | ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿಸ್ತರಿಸಲಾದ ದಿನಾಂಕ | 02.02.2026 ರಿಂದ 28.02.2026 ರವರೆಗೆ |

- ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಅಭ್ಯರ್ಥಿಗಳು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

- ಅಭ್ಯರ್ಥಿಯು ಪರೀಕ್ಷಾ ಅರ್ಜಿ ಸಲ್ಲಿಸಿದ ನಂತರ ವಿಷಯ ಅಥವಾ ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.

- ಪರೀಕ್ಷಾ ಕೇಂದ್ರ ನಿಗದಿಗೆ ಸಾಕಷ್ಟು ಅಭ್ಯರ್ಥಿಗಳು ದಾಖಲಾಗದಿದ್ದರೆ ಅಥವಾ ಇನ್ನಾವುದೇ ಕಾರಣಕ್ಕಾಗಲಿ ರಾಜ್ಯದ ಯಾವುದೇ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಹತ್ತಿರದ ಪರೀಕ್ಷಾ ಕೇಂದ್ರಕ್ಕೆ ವಿಲೀನಗೊಳಿಸುವ ಪೂರ್ಣ ಅಧಿಕಾರವನ್ನು ವಿಶ್ವವಿದ್ಯಾಲಯವು ಹೊಂದಿರುತ್ತದೆ.

- ಶಾಸ್ತ್ರ ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ತಾಳ್ಮೆಯಿಂದಿದ್ದು, ಶಾಂತಿಯುತವಾದ ವಾತಾವರಣವನ್ನು ಕಾಪಾಡಲು ಪೋಷಕರಿಗೆ ಸೂಚಿಸಲಾಗಿದೆ. ಹಾಗೂ ಪರೀಕ್ಷೆಗಳು ಸುಗಮವಾಗಿ ಸಕಾಲಕ್ಕೆ ನಡೆಯಲು ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಸಹಕಾರ ನೀಡುವುದು ಪೋಷಕರ ಜವಾಬ್ದಾರಿಯಾಗಿರುತ್ತದೆ.

- ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ವಿಶೇಷ ವೇಷ ಭೂಷಣ ಇತ್ಯಾದಿಗಳನ್ನು ಧರಿಸುವ ಅಗತ್ಯವಿಲ್ಲ, ಅಭ್ಯಾಸ ಮಾಡಲು ಉಪಯೋಗಿಸುವ ಸಾಮಾನ್ಯ ಉಡುಪನ್ನು ಧರಿಸಲು ಅವಕಾಶ ಕಲ್ಪಿಸಿದೆ.

- ಪ್ರಾಯೋಗಿಕ ಪರೀಕ್ಷೆಯ ದಿನಾಂಕದಂದು ಸೂಚಿತ ಸಮಯಕ್ಕಿಂತ ಅರ್ಧ ಗಂಟೆ ಮೊದಲು ಕಡ್ಡಾಯವಾಗಿ ಹಾಜರಾಗಬೇಕು.

- ಪ್ರಾಯೋಗಿಕ ಪರೀಕ್ಷೆಗೆ ವೇಳಾಪಟ್ಟಿಯನ್ನು ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿ ನೀಡಲಾಗುವುದು. ಪ್ರಾಯೋಗಿಕ ಪರೀಕ್ಷೆಗೆ ಅಭ್ಯರ್ಥಿಗಳು ವಿಶ್ವವಿದ್ಯಾಲಯದಿಂದ ಗೊತ್ತುಪಡಿಸಿದ ದಿನಾಂಕದಂದೇ ಕಡ್ಡಾಯವಾಗಿ ಹಾಜರಾಗುವುದು. ಒಂದು ವೇಳೆ ಗೊತ್ತುಪಡಿಸಿದ ದಿನಾಂಕದಂದು ಅಭ್ಯರ್ಥಿ ಪ್ರಾಯೋಗಿಕ ಪರೀಕ್ಷೆಗೆ ಗೈರುಹಾಜರಾದಲ್ಲಿ ಅಂತಹ ಅಭ್ಯರ್ಥಿಗಳು ಮುಂದಿನ ವರ್ಷದ ಶೈಕ್ಷಣಿಕ ಸಾಲಿನಲ್ಲಿ ನಡೆಸಲಾಗುವ ಪರೀಕ್ಷೆಗೆ ಮತ್ತೆ ನೋಂದಾಯಿಸಿ ಹಾಜರಾಗತಕ್ಕದ್ದು.

- ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಕರು/ ಅಭ್ಯರ್ಥಿಗಳು/ಸಾಥಿದಾರರು ನಿಗದಿತ ಅವಧಿಯಲ್ಲಿ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯ. ತಡವಾಗಿದೆ ಎಂಬ ಕಾರಣಗಳನ್ನು ನೀಡಿದಲ್ಲಿ ಪ್ರಾಯೋಗಿಕ ಪರೀಕ್ಷಾ ಸಮಯವನ್ನು ವಿಸ್ತರಿಸಲು ಸಾಧ್ಯವಿಲ್ಲ.

- ಪ್ರಾಯೋಗಿಕ ಪರೀಕ್ಷಾ ಅವಧಿ ಬೆಳಗ್ಗೆ 9.00 ಗಂಟೆಯಿಂದ ಸಂಜೆ 6.00 ಗಂಟೆಯೊಳಗೆ ಮುಕ್ತಾಯಗೊಳಿಸಲಾಗುವುದು. ಈ ಅವಧಿಯು ಉಪಹಾರದ ಸಮಯವನ್ನೂ ಒಳಗೊಂಡಿರುತ್ತದೆ.

- ಪೋಷಕರು ಹಾಗೂ ನೋಂದಣಿ ಮಾಡಿಕೊಳ್ಳದ ಶಿಕ್ಷಕರು/ಸಾಥಿದಾರರಿಗೆ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶವನ್ನು ನಿಷೇಧಿಸಲಾಗಿದೆ.

- ನೃತ್ಯ ವಿಭಾಗದ ವಿದ್ಯಾರ್ಥಿಗಳು ತಮ್ಮ ಶಿಕ್ಷಕರು/ಪರೀಕ್ಷಕರು ಸೂಚಿಸುವ ಪ್ರಾಯೋಗಿಕ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು.

- ಸಂಗೀತ ವಿಭಾಗದ ವಿದ್ಯಾರ್ಥಿಗಳು ಆಯ್ಕೆ ಮಾಡಿದ ಪರೀಕ್ಷಾ ಕೇಂದ್ರದಲ್ಲಿಯೇ ಶಾಸ್ತ್ರಪತ್ರಿಕೆ ಹಾಗೂ ಪ್ರಾಯೋಗಿಕ ಪತ್ರಿಕೆ ಪರೀಕ್ಷೆಗಳು ನಡೆಯುತ್ತದೆ. ಇದರಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

- **ಒಮ್ಮೆ ಆಯ್ಕೆ ಮಾಡಿಕೊಂಡ ನಂತರ ಪರೀಕ್ಷಾ ಕೇಂದ್ರಗಳ ಬದಲಾವಣೆಗೆ ಅವಕಾಶವಿರುವುದಿಲ್ಲ.**

- ವಿದ್ವತ್‌ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಗಳನ್ನು ವಿಶ್ವವಿದ್ಯಾಲಯವು ನಿಗದಿಪಡಿಸುವ ಪರೀಕ್ಷಾ ಕೇಂದ್ರಗಳಲ್ಲಿಯೇ ನಡೆಸಲಾಗುವುದು.

ವಿಶ್ವವಿದ್ಯಾಲಯದ ಜಾಲತಾಣದಲ್ಲಿ www.musicuniversity.ac.in ಆನ್‌ಲೈನ್ ಅರ್ಜಿಯು ದೊರೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821– 4535020/ 9480150826 ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

21/1/26

ಕುಲಸಚಿವರು (ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು-04

ಪ್ರತಿಗಳು:

1. ಕುಲಪತಿಗಳು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು–04.

2. ಕುಲಸಚಿವರು (ಆಡಳಿತ)/ಕುಲಸಚಿವರು (ಪರೀಕ್ಷಾಂಗ) ವಿಭಾಗ/ಹಣಕಾಸು ಅಧಿಕಾರಿಗಳು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು–04

3. ಕಛೇರಿ ಪ್ರತಿ.